ಕರ್ನಾಟಕ ಸರ್ಕಾರದ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.**

**ಸಂಖ್ಯೆ: ಯೋ3/ಎಸ್.ಡಿ.ಪಿ/ಕ್ರಿಯೋ-01/19-20** **ದಿನಾಂಕ: 13.11.2019**

**ಜ್ಞಾಪನ**

**ವಿಷಯ:-** 2019-20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯ ಕಾರ್ಯಕ್ರಮಗಳಿಗೆ ಒದಗಿಸಲಾದ ಅನುದಾನದಲ್ಲಿ 2 ಮತ್ತು 3ನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:-** 1) ಈ ಕಛೇರಿಯ ಪತ್ರ ಸಂಖ್ಯೆ: ಯೋ3/ಎಸ್.ಡಿ.ಪಿ/ಕ್ರಿಯೋ-01/19-20 ದಿನಾಂಕ: 07.08.2019
2) ಸರ್ಕಾರದ ಆದೇಶ ಸಂಖ್ಯೆ: ಇಪಿ 02 ಯೋಸಕ 2019, ದಿ:02.08.2019.
3) ಸರ್ಕಾರದ ಆದೇಶ ಸಂಖ್ಯೆ: ಇಪಿ 03 ಯೋಯೋಕ 2019, ದಿ:23.04.2019
4) ಸರ್ಕಾರದ ಆದೇಶ ಸಂಖ್ಯೆ: ಇಪಿ 03 ಯೋಯೋಕ 2019, ದಿ:24.10.2019

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯ **"ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯ"** ಲೆಕ್ಕ ಶೀರ್ಷಿಕೆ:4202-01-202-1-05-133ರಡಿ ನಿಗದಿಪಡಿಸಲಾದ ರೂ.3000-00 ಲಕ್ಷಗಳಿಗೆ 27 ಸರ್ಕಾರಿ ಪ್ರಾಥಮಿಕ ಶಾಲೆಗಳು ಹಾಗೂ 159 ಸರ್ಕಾರಿ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 201 ಕೊಠಡಿಗಳ ನಿರ್ಮಾಣಕ್ಕೆ ಅಗತ್ಯವಿರುವ ವಿಶೇಷ ಅಭಿವೃದ್ಧಿ ಯೋಜನೆ 2008-09ರ ಅನುಷ್ಠಾನ ಕುರಿತ ಮಾರ್ಗಸೂಚಿಗಳು ಹಾಗೂ Cumulative Deprivation Index(C.D.I) ಅನ್ವಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಉಲ್ಲೇಖ-1 ರಲ್ಲಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

2019-20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಲೆಕ್ಕ ಶೀರ್ಷಿಕೆ: 4202-01-202-1-05-133 ರಡಿ ಸಿ.ಡಿ.ಐ. ಇಂಡೆಕ್ಸ್ ಪ್ರಕಾರವೇ ವಿಶೇಷ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಯಂತೆ ಯೋಜನೆಯನ್ನು ಅನುಷ್ಠಾಗೊಳಿಸಬೇಕೆಂಬ ನಿಬಂಧನೆಯೊಂದಿಗೆ 27 ಸರ್ಕಾರಿ ಪ್ರಾಥಮಿಕ ಶಾಲೆಗಳು ಹಾಗೂ 159 ಸರ್ಕಾರಿ ಪ್ರೌಢಶಾಲೆಗಳ ಒಟ್ಟು 201 ಕೊಠಡಿಗಳ ನಿರ್ಮಾಣಕ್ಕೆ ರೂ. 3000-00 ಲಕ್ಷ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತಾರೆ.

ಮುಂದುವರೆದು, ಸದರಿ ಲೆಕ್ಕಶೀರ್ಷಿಕೆಗಳಲ್ಲಿ ಈಗಾಗಲೇ ಬಿಡುಗಡೆಯಾದ ಹಣದಲ್ಲಿ ಶೇ.25 ರಷ್ಟು ಹಣವನ್ನು ಉಪಯೋಗಿಸಿದ್ದಲ್ಲಿ 2 ಮತ್ತು 3ನೇ ತ್ರೈಮಾಸಿಕ ಕಂತಿನ ಅಯವ್ಯಯವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ರಾಜ್ಯವಲಯದಡಿ ಮುಂದುವರಿಕೆ ಕಾರ್ಯಕ್ರಮಗಳು ಅನುಷ್ಠಾನಕ್ಕೆ ವೇತನ ಮತ್ತು ಇತರೆ ಭತ್ಯೆಗಳ ಬಾಬ್ತಿನಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ 2 ಮತ್ತು 3ನೇ ತ್ರೈಮಾಸಿಕ ಅನುದಾನವನ್ನು ಉಲ್ಲೇಖ(4) ರಲ್ಲಿ ಬಿಡುಗಡೆಗೊಳಿಸಿದೆ. ಸರ್ಕಾರದ ಪ್ರತಿ ಲಗತ್ತಿಸಿದೆ. ಸರ್ಕಾರದ ಆದೇಶದನ್ವಯ ಕೆಳಕಂಡಂತೆ ಆದೇಶಿಸಿದೆ.

**ಆದೇಶ:_**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ 2019-20ನೇ ಸಾಲಿನ ಪರಿಷ್ಕೃತ ಅಯವ್ಯಯದಲ್ಲಿ ರಾಜ್ಯವಲಯದಡಿ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಿಗದಿಪಡಿಸಿರುವ ಅನುದಾನದಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ನಿಯಮಾನುಸಾರ ಭರಿಸಲು ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಅನುಮತಿ ನೀಡಿ ಆದೇಶಿಸಿದೆ.

ಷರತ್ತುಗಳು:

1) ಎಸ್.ಡಿ.ಪಿ. ಕಾರ್ಯಕ್ರಮದ ಕ್ರಿಯಾ ಯೋಜನೆ ಮಾಹಿತಿಯನ್ನು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು.
2) ತಾಲ್ಲೂಕುವಾರು ಕ್ರಿಯಾ ಯೋಜನೆ ಮಾಹಿತಿಯನ್ನು ಎಸ್.ಡಿ.ಪಿ ಅಂತರ್ಜಾಲ **(sdp.kar.nic.in)** ದಲ್ಲಿ ಅಳವಡಿಸಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಖಾತ್ರಿ ಪಡಿಸಿಕೊಳ್ಳತಕ್ಕದ್ದು.
3) ಸಮಗ್ರವಾದ MPIC ಅನ್ನು ತಯಾರಿಸಿ ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುವ ಮತ್ತು ಉಸ್ತುವಾರಿ ಮಾಡಿರುವ ಬಗ್ಗೆ ಕಾರ್ಯದರ್ಶಿ ಮಟ್ಟದ ಎಂ.ಎಂ.ಆರ್ ಸಭೆಗಳಲ್ಲಿ ಖಾತ್ರಿ ಮಾಡಿಕೊಳ್ಳತಕ್ಕದ್ದು.
4) ಅಂತರ್ಜಾಲದಲ್ಲಿನ ತಾಲ್ಲೂಕುವಾರು ಮಾಹಿತಿಯನ್ನು ನಿಯಮಿತವಾಗಿ ಇಂಧೀಕರಿಸಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳತಕ್ಕದ್ದು.
5) 2019-20ನೇ ಸಾಲಿನಲ್ಲಿಯೇ ಕಾಮಗಾರಿಗಳನ್ನು ಗುರಿಗಳಿಗನುಗುಣವಾಗಿಯೇ ಮುಕ್ತಾಯಗೊಳಿಸತಕ್ಕದ್ದು.
6) ವಿಶೇಷ ಅಭಿವೃದ್ಧಿ ಯೋಜನೆ ಅನುದಾನವು ವ್ಯಪಗತ (ಲ್ಯಾಪ್ಸ್) ಆಗದಂತೆ ಆರ್ಥಿಕ ವರ್ಷದಲ್ಲಿ ಸಂಪೂರ್ಣ ವಿನಿಯೋಗಿಸತಕ್ಕದ್ದು.
7) ರಾಜ್ಯಮಟ್ಟದ ಅನುಷ್ಠನ ಇಲಾಖೆಗಳು ಕಾಲ ಕಾಲಕ್ಕೆ ಬಿಡುಗಡೆ ಮಾಡುವ ಅನುದಾನಕ್ಕೆ ಹೊರಡಿಸುವ ಆದೇಶಗಳ ಪ್ರತಿಗಳನ್ನು ಕೂಡಲೇ ವಿಶೇಷ ಕೋಶಕ್ಕೆ ಕಳುಹಿಸುವುದಲ್ಲದೇ ಇಲಾಖೆಯ ಜಿಲ್ಲಾಮಟ್ಟದ ಅನುಷ್ಠಾನ ಅಧಿಕಾರಿಗಳಿಗೆ ತಪ್ಪದೇ ಕಳುಹಿಸತಕ್ಕದ್ದು.
8) ಪ್ರತಿ ಮಾಹೆಯ 15 ರೊಳಗೆ ಹಿಂದಿನ ತಿಂಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿಭಾಗವಾರು, ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಕಾಮಗಾರಿವಾರು ವಿವರಗಳನ್ನು (Hard copy & Soft copy) ಸರ್ಕಾರದ ಉಪ ಕಾರ್ಯದರ್ಶಿ, ವಿಶೇಷ ಕೋಶ, ಯೋಜನಾ ಇಲಾಖೆ, ಕೊಠಡಿ ಸಂಖ್ಯೆ:116, 1ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿತಕ್ಕದ್ದು.
9) ಪ್ರಗತಿ ಪರಿಶೀಲನೆಗಾಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಕೆ.ಡಿ.ಪಿ.ಸಭೆಗೆ ಪ್ರತಿ ಮಾಹೆ ಪ್ರಗತಿ ವಿವರ ಒದಗಿಸತಕ್ಕದ್ದು.
10) ಕಾಮಗಾರಿಗಳಿಗೆ ಅನುದಾನವನ್ನು "2019-20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ನಿರ್ಮಿಸಿದೆ" ಎಂದು ಶಾಶ್ವತ ನಾಮಫಲಕ ಅಳವಡಿಸತಕ್ಕದ್ದು.
11) ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಎಸ್‌ಡಿಪಿ ಅಲ್ಲದ ತಾಲ್ಲೂಕುಗಳಲ್ಲಿ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ.
12) ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಂಡ ಪ್ರತಿಯೊಂದು ಕಾಮಗಾರಿಗಳನ್ನು Geo tag ನಲ್ಲಿ ಅಳವಡಿಸತಕ್ಕದ್ದು.
13) ತಾಲ್ಲೂಕುಗಳಿಗೆ ಕ್ರಿಯಾ ಯೋಜನೆ ರೂಪಿಸುವ ಸಂದರ್ಭದಲ್ಲಿ ಅಂತಹ ಕಾಮಗಾರಿಗಳನ್ನು ಬೇರೆ ಯಾವುದೇ ಲೆಕ್ಕ ಶೀರ್ಷಿಕೆಯಡಿಯಲ್ಲಿ ತೆಗೆದುಕೊಳ್ಳದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.
14) C.D.I. Index ಪ್ರಕಾರವೇ ಕ್ರಿಯಾ ಯೋಜನೆ ತಯಾರಿಸಿ, ಅದರಂತೆಯೇ ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
15) ಬಿಡುಗಡೆಯಾದ ಅನುದಾನದ ಬಳಕೆ ಹಾಗೂ ಕಾಮಗಾರಿಗಳ ಪ್ರಗತಿಯ ವಿವರಗಳನ್ನು ವಿದ್ಯಾರ್ಥಿಗಳ ಸಾಧನೆ ಜಾಢೀಕರಣ ವ್ಯವಸ್ಥೆ (Students Achievement Tracking SATS) ಯ ಪ್ರತ್ಯೇಕ ಲಿಂಕ್‌ನಲ್ಲಿ ಹಾಗೂ ಭರಿಸಲಾದ ವೆಚ್ಚದ ವಿವರಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ (Decision Supportive System) ಡಿ.ಎಸ್.ಎಸ್ ಪೋರ್ಟಲ್‌ನಲ್ಲಿ ಇಂದೀಕರಿಸತಕ್ಕದ್ದು.
16) ಅನುದಾನ ಬಿಡುಗಡೆಯಾದ 6 ತಿಂಗಳುಗಳ ಒಳಗಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸತಕ್ಕದ್ದು.

ಸದರಿ ವಿಶೇಷ ಅಭಿವೃದ್ಧಿ ಕ್ರಿಯಾ ಯೋಜನೆಗೆ ಅಗತ್ಯವಾದ ರೂ.3000.00 ಲಕ್ಷಗಳನ್ನು 2019–20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ "ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯ" ಲೆಕ್ಕ ಶೀರ್ಷಿಕೆ: 4202–01–202–1–05–133 ಅಡಿಯಲ್ಲಿ ಈಗಾಗಲೇ ಪ್ರಥಮ ತ್ರೈಮಾಸಿಕ ಅನುದಾನವನ್ನು ದಿನಾಂಕ: **07.08.2019** ರಲ್ಲಿ ಪ್ರಥಮ ಕಂತಿನಲ್ಲಿ ಒಟ್ಟು ರೂ 747.59 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಉಲ್ಲೇಖ (4)ರಂತೆ 2 ಮತ್ತು 3ನೇ ತ್ರೈಮಾಸಿಕದ ಮೊತ್ತ ರೂ 1495.18 ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ನಿಯಮಾನುಸಾರ ಭರಿಸಲು ಸಂಬಂಧಿಸಿದ (ಜಿಲ್ಲಾವಾರು ಅನುದಾನದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ) ಅನುದಾನವನ್ನು 'D' ಮೋಡ್‌ನಲ್ಲಿ ಅಪಲೋಡ್ ಮಾಡಲಾಗಿದೆ.

ಒದಗಿಸಲಾದ ಅನುದಾನವು ವ್ಯಪಗತವಾಗದಂತೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರ್ಣಪ್ರಮಾಣದಲ್ಲಿ ಭರಿಸಿಕೊಳ್ಳತಕ್ಕದ್ದು. ಬಿಡುಗಡೆಯಾದ ಅನುದಾನವನ್ನು CTS 8 ನಲ್ಲಿ ಖಜಾನೆಯಿಂದ ಸೆಳೆಯಲು ಆದೇಶ ನೀಡಿದೆ.

ಸದರಿ ಕಾಮಗಾರಿಗಳನ್ನು 'ಠೇವಣಿ ವಂತಿಕೆ' ಕಾಮಗಾರಿಗಳೆಂದು ಪರಿಗಣಿಸತಕ್ಕದ್ದು, ಬಿಡುಗಡೆ ಮಾಡಲಾದ ಅನುದಾನವನ್ನು ನಿಗಧಿತ ಉದ್ದೇಶಕ್ಕೆ ನಿಯಮಾನುಸಾರ ಭರಿಸತಕ್ಕದ್ದು ಹಾಗೂ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸೂಕ್ತ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಚಲಿತ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–1999 ಹಾಗೂ ಅದರಡಿಯಲ್ಲಿ ಹೊರಡಿಸಲಾದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಸದರಿ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಎಂ.ಪಿ.ಕ್ ಸಭೆಯಲ್ಲಿ ತಪ್ಪದೆ ಹಾಜರುಪಡಿಸತಕ್ಕದ್ದ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019 ದಿನಾಂಕ: 04–07–2019ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ. (ಸರ್ಕಾರದ ಆದೇಶ ಮತ್ತು ಸುತ್ತೋಲೆಗಳು ಶಿಕ್ಷಣ ಇಲಾಖೆಯ ಅಂತರ್ಜಾಲ www: schooleducation.kar.nic.in ನಲ್ಲಿ ನಮ್ಮ ಇಲಾಖೆ–> ಆಯವ್ಯಯ & ಯೋಜನೆ–> ವಾರ್ಷಿಕ ಆಯವ್ಯಯ–> ಆಯವ್ಯಯ ದಾಖಲೆಗಳು, ಈ ಪೋರ್ಟಲ್‌ನಲ್ಲಿ ಲಭ್ಯವಿದೆ)

18/11/19

**(ಡಾ. ಕೆ.ಜಿ ಜಗದೀಶ) ಭಾ.ಆ.ಸೇ**
**ಆಯುಕ್ತರು**

**<u>ಇವರಿಗೆ:</u>**

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಮುಂದಿನ ಕ್ರಮಕ್ಕಾಗಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಪ್ರಾಥಮಿಕ & ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಬೆಂಗಳೂರು.
2. ಕಛೇರಿ ಪ್ರತಿ

ತಾಲ್ಲೂಕು ದುರಸ್ಥಿ ಸೂಚ್ಯಂಕದ ಪ್ರಕಾರ 2019-20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕೊಠಡಿ ನಿರ್ಮಾಣಕ್ಕಾಗಿ ಜಿಲ್ಲಾವಾರ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ

ಸರ್ಕಾರಿ ಆದೇಶ ಸಂಖ್ಯೆ : ಇಪಿ 03 ಯೋಯೋಕ 2019 ಬೆಂಗಳೂರು ದಿನಾಂಕ; 23-04-2019

| ಲೆಕ್ಕ ಶೀರ್ಷಿಕೆ: 4202-01-202-1-05-133 | | | | | | | |
|---|---|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆಗಳು | ಕೊಠಡಿಗಳ ಸಂಖ್ಯೆ | | ನಿಗದಿಪಡಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಈಗಾಗಲೇ ಬಿಡುಗಡೆಯಾದ 1ನೇ ತ್ರೈಮಾಸಿಕ ಅವಧಿಗೆ ಬಿಡುಗಡೆಯಾದ | 2 ಮತ್ತು 3ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾದ ಅನುದಾನ | ಷರಾ |
| | | ಪ್ರಾಥಮಿಕ | ಪ್ರೌಢ ಶಾಲೆ | | | | |
| 1 | ಬಳ್ಳಾರಿ | 0 | 9 | 141.75 | 35.4375 | 70.875 | |
| 2 | ಬೀದರ್ | 0 | 11 | 173.25 | 43.3125 | 86.625 | |
| 3 | ಯಾದಗಿರಿ | 0 | 9 | 141.75 | 35.4375 | 70.875 | |
| 4 | ಕಲಬುರ್ಗಿ | 7 | 19 | 373.45 | 93.3625 | 186.725 | |
| 5 | ರಾಯಚೂರು | 0 | 14 | 220.50 | 55.125 | 110.25 | |
| 6 | ಕೊಪ್ಪಳ | 0 | 9 | 141.75 | 35.4375 | 70.875 | |
| 7 | ಬೆಳಗಾವಿ | 2 | 6 | 115.70 | 28.9250 | 57.850 | |
| 8 | ವಿಜಯಪುರ | 0 | 12 | 189.00 | 47.250 | 94.50 | |
| 9 | ಬಾಗಲಕೋಟೆ | 0 | 5 | 78.75 | 19.6875 | 39.375 | |
| 10 | ಧಾರವಾಡ | 1 | 2 | 42.10 | 10.5250 | 21.050 | |
| 11 | ಗದಗ | 1 | 2 | 42.10 | 10.5250 | 21.050 | |
| 12 | ಹಾವೇರಿ | 0 | 4 | 63.00 | 15.7500 | 31.50 | |
| 13 | ಉತ್ತರ ಕನ್ನಡ | 1 | 1 | 26.35 | 6.5875 | 13.175 | |
| | ಶಿರಸಿ ಶೈಕ್ಷಣಿಕ | 0 | 2 | 31.5 | 7.875 | 15.75 | |
| 14 | ರಾಮನಗರ | 2 | 3 | 68.45 | 17.1125 | 34.225 | |
| 15 | ಬೆಂಗಳೂರು ಗ್ರಾಮಾಂತರ | 0 | 1 | 15.75 | 3.9375 | 7.875 | |
| 16 | ಬೆಂಗಳೂರು ದಕ್ಷಿಣ (ನಗರ) | 1 | 0 | 10.60 | 2.6500 | 5.30 | |
| 17 | ಚಿತ್ರದುರ್ಗ | 1 | 7 | 120.85 | 30.2125 | 60.425 | |
| 18 | ದಾವಣಗೆರೆ | 1 | 8 | 136.60 | 34.1500 | 68.300 | |
| 19 | ಕೋಲಾರ | 3 | 1 | 47.55 | 11.8875 | 23.775 | |
| 20 | ಚಿಕ್ಕಬಳ್ಳಾಪುರ | 1 | 4 | 73.60 | 18.4000 | 36.800 | |
| 21 | ಶಿವಮೊಗ್ಗ | 0 | 2 | 31.50 | 7.8750 | 15.75 | |
| 22 | ತುಮಕೂರು | 1 | 15 | 246.85 | 61.7125 | 123.425 | |
| 23 | ಚಿಕ್ಕಮಗಳೂರು | 0 | 3 | 47.25 | 11.8125 | 23.625 | |
| 24 | ಹಾಸನ | 2 | 3 | 68.45 | 17.1125 | 34.225 | |
| 25 | ಮಂಡ್ಯ | 1 | 5 | 89.35 | 22.3375 | 44.675 | |
| 26 | ಮೈಸೂರು | 1 | 8 | 136.60 | 34.1500 | 68.300 | |
| 27 | ಚಾಮರಾಜನಗರ | 5 | 4 | 116.00 | 29.0000 | 58.00 | |
| | ಒಟ್ಟು ರೂ | 31 | 169 | 2990.35 | 747.59 | 1495.175 | |

ಸಹ ನಿರ್ದೇಶಕರು (ಶಾಲಾ ಶಿಕ್ಷಣ)
ಆಯುಕ್ತರ ಕಛೇರಿ, ಸಾ.ಶಿ.ಇ
ಬೆಂಗಳೂರು